ಶ್ರೀ ಜಿ. ರಾಮೇಗೌಡ.—ತಾವು ಈ ಸಾಲಿಗೆ ಮಾಗಡಿ ತಾಲ್ಲೂಕಿಗೆ ಒಟ್ಟು 9,167 ರೂಪಾಯಿಗಳನ್ನು ಒದಗಿಸುವುದಾಗಿ ತಿಳಿಸಿದ್ದೀರಿ ; ಮಾಗಡಿ ತಾಲ್ಲೂಕಿನಲ್ಲಿ ಕೇವಲ ಒಂದು ಬಾವಿ ತೋಡಿಸಬೇಕೆಂದರೂ 3,000 ರೂಪಾಯಿಗಳಾಗುತ್ತವೆ. ಈ ಪ್ರಕಾರ ವರ್ಷಕ್ಕೆ 3 ಬಾವಿಗಳಂತೆ ಹೋದರೆ ನಮ್ಮ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೂ ಬಾವಿಗಳನ್ನು ಒದಗಿಸಬೇಕೆಂದರೆ ಕೊನೆಯಪಕ್ಷ ಇನ್ನೂ 27 ವರ್ಷಗಳು ಬೇಕಾಗುತ್ತದಲ್ಲವೆ ?

ಶ್ರೀ ಆರ್. ಎಂ. ಪಾಟೀಲ್.—ಎಲ್ಲಾ ಬಾವಿಗಳಿಗೂ 3,000 ರೂಪಾಯಿಗಳು ಬೇಕಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆಯೇ ಹಣದ ಸ್ಥಿತಿಯೂ ಅದೇ ರೀತಿ ಇರುತ್ತದೆಂದು ಭಾವಿಸಕೂಡದು. ಕೇಂದ್ರ ಸರ್ಕಾರದವರು ಹಳ್ಳಿಗಳ ಕಡೆ ನೀರಿನ ವ್ಯವಸ್ಥೆ ಮಾಡಲು ಹೆಚ್ಚಿಗೆ ಸಹಾಯ ಮಾಡಿದರೆ ಬೇಗ ಮಾಡಬಹುದು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕುಡಿಯುವ ನೀರಿನ ಬಾವಿಗಳಿಲ್ಲದಿರುವುದಕ್ಕೆ ಒಂದು ಕಾರಣವೆಂದರೆ, ನಿಮ್ಮ ಎನ್ ಇ ಎಸ್ ನವರು ಎಲ್ಲಿ ನೀರು ಬರುವುದಿಲ್ಲವೋ ಅಂಥಹ ಜಾಗದಲ್ಲಿ ಬಾವಿ ತೆಗೆಯಿಸಲಕ್ಕೆ ಅವರು ಪ್ರಯತ್ನ ಮಾಡುತ್ತಾರೆ ; ಇದರಿಂದಾಗಿ ಪರಿಸ್ಥಿತಿ ಹಾಗೆಯೇ ಉಳಿದಿದೆ ; ಎನ್.ಇ.ಎಸ್.ನವರ ಮಂದಗಾಮಿ ನೀತಿಯೇ ಇನ್ನೊಂದು ಕಾರಣ. ಇದರಿಂದಾಗಿ ಎಷ್ಟೋ ಹಣ ಲ್ಯಾಪ್ಸ್ ಸಹ ಆಗಿದೆ.

ಶ್ರೀ ಆರ್. ಎಂ. ಪಾಟೀಲ್.—ಎನ್.ಇ.ಎಸ್.ನವರು ಎಷ್ಟು ಸಾಧ್ಯವೋ ಅಷ್ಟೂ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ತಕರಾರು ಮಾಡುವುದು ಸರಿಯಾಗಿರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 88 ಹಳ್ಳಿಗಳಲ್ಲಿ ಈ ವರ್ಷ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳು ಒದಗಿಸಲು ಸಾಧ್ಯವಿದೆ ?

ಶ್ರೀ ಆರ್. ಎಂ. ಪಾಟೀಲ್.—ಎಷ್ಟು ಹಣ ಲಭ್ಯವಾಗುತ್ತದೆಯೋ ಅಷ್ಟು ಕೊಡುತ್ತೇವೆ.

Borewell in Kodathi Village.

*Q.—691. Sri D. MUNICHINNAPPA (Bangalore South).—

Will the Minister for Development, Panchyat Raj and Municipal Administration be pleased to state :—

(*a*) when the borewell in Kodathi village, Horathur Hobli, Bangalore South Taluk was constructed ;

(*b*) when arrangements would be made to fix a pump to the said borewell and supply water to the people for drinking purposes ?

A.—Sri R. M. PATIL (Minister for Development, Panchayat Raj and Municipal Administration).—

(*a*) The work was commenced on 22nd August 1962 and was completed on 7th November 1962.

(*b*) The matter is under consideration.

ಶ್ರೀ ಡಿ. ಮುನಿಚಿನ್ನಪ್ಪ.—ಈ ಬೋರ್‌ವೆಲ್ ಬಾವಿ ಕೆಲ್ಸ ಮುಗಿಸಿ ನಾಲ್ಕು ವರ್ಷವಾಯಿತು. ಸರಕಾರದ ಅಪ್ರೂವ್ ಲೆಕ್ಕ ಬಂದಿದೆ. ನೀರು ಇಲ್ಲದೆ ಅಲ್ಲಿ ಜನರಿಗೆ ಬಹಳ ಕಷ್ಟವಾಗಿದೆ. ಇದಕ್ಕೆ ಜಾಗ್ರತೆ ಸಹಾಯ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಈ ಗ್ರಾಮದ ಪರಿಸ್ಥಿತಿ ಹೀಗೆ ಇದೆ. 1962 ರಲ್ಲಿ ಈ ಬಾವಿಗೆ 3,600 ರೂಪಾಯಿ ಖರ್ಚು ಮಾಡಿ 147 ಅಡಿ ಬಾವಿ ತೆಗೆದಿದೆ. ಇದಕ್ಕೆ ಪೈಪ್ ವಾಟರ್ ಕೊಡಬೇಕೆಂದು 16,650 ರೂಪಾಯಿ ಎಸ್ಟಿಮೇಟು ಮಾಡಿದೆ. ಲೋಕರ್ ಡೆವೆಲಪ್‌ಮೆಂಟಿನಿಂದ ಅಷ್ಟು ಹಣ ಕೊಡುವುದಕ್ಕಾಗುವುದಿಲ್ಲ. ನ್ಯಾಷನರ್ ರೂರರ್ ವಾಟರ್ ಸಪ್ಲೈ ಸ್ಕೀಂನಿಂದ ತೆಗೆದು ಕೊಳ್ಳಬೇಕೆಂದು ಹೇಳಿದರು. ಈ ಹಳ್ಳಿಯಲ್ಲಿ 647 ಜನ ಇದ್ದಾರೆ. ಇಂಥ ಒಂದು ಹಳ್ಳಿಗೆ ಇಷ್ಟು ಹಣ ಖರ್ಚು ಮಾಡುವುದು ಈಗಿನ ಹಣದ ಅಭಾವ ಪರಿಸ್ಥಿತಿಯಲ್ಲಿ ಯೋಗ್ಯ ಎಂದು ಅನಿಸುವುದಿಲ್ಲ.

ಇದೇ ಪರಿಸ್ಥಿತಿಯಲ್ಲಿ ನಾವಿರಾರು ಹಳ್ಳಿಗಳು ದೇಶದಲ್ಲಿವೆ. ಆದುದರಿಂದ ಪೈಪ್ ವಾಟರ್ ಕೊಡುವುದು ಸಾಧ್ಯವಿಲ್ಲ ಎಂಬ ಮಾತನ್ನು ಚೀಫ್ ಎಂಜಿನಿಯರ್ ಅವರು ತಿಳಿಸಿದ್ದಾರೆ. ಕುಡಿಯುವ ನೀರಿನ ಬಾವಿ ಕೊಡಬೇಕೆಂದು ಸರಕಾರದ ಮನಸ್ಸಿನಲ್ಲಿದೆ. ಇನ್ನೊಂದು ಬಾವಿ ಕಟ್ಟಿಸಿಕೊಡ ಬೇಕೆಂದು ಸರಕಾರದ ಮನಸ್ಸಿನಲ್ಲಿದೆ. ಇನ್ನೊಂದು ಬಾವಿ ಕಟ್ಟಿಸಿಕೊಡಬಹುದು. ಆದರೆ ಪೈಪ್ ವಾಟರ್ ಕೊಡುವುದಕ್ಕೆ ಮಾತ್ರ ಸಾಧ್ಯವಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ಈ ಗ್ರಾಮದ ಸುತ್ತಮುತ್ತು ಐದಾರು ನೂರು ಮನೆಗಳಿವೆ. ಅಲ್ಲಿ ನೀರು ಸಿಕ್ಕುವುದಿಲ್ಲ. ನೀರಿನ ಅವಶ್ಯಕತೆ ಇದೆ, ಆದುದರಿಂದ ಬೇಗನೆ ಏನಾದರೂ ಮಾಡುತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—ಪೈಪ್ ವಾಟರ್ ಕೊಡುವುದಕ್ಕೆ ಆಗುವುದಿಲ್ಲ ಎಂದು ಚೀಫ್ ಎಂಜಿನಿಯರ್ ಅವರ ಅಭಿಪ್ರಾಯ ಇದೆ. ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡಲು ತಕರಾರು ಇಲ್ಲ.

Working of Sulya Panchayat.

*Q.—702. Sri K. P. GADAG (Gadag).— (On behalf of Sri S. Subbiah Naik (Sullya)].—

Will the Minister for Development, Panchayat Raj and Municipal Administration be pleased to state :—

(*a*) whether the Sulya Panchayat which was defunct for the last 3—4 years had re-assembled on 3rd May 1966 and passed resolution ;

(*b*) whether resolution in respect of urgent works such as supply of water and electricity to Sulya Town and sanitation works in the bus stand were passed ;

(*c*) the progress of works made so far in this behalf ?

A.—Sri R. M. PATIL (Minister for Development, Panchayat Raj and Municipal Administration).—

(*a*) Yes.
(*b*) Yes.
(*c*) No progress achieved.

Sri K. P. GADAG.—May I know why this Panchayet Committee was defunct for three or four years ?

Sri R. M. PATIL.—Perhaps, it may be due to faction.

ಶ್ರೀ ಎ. ಕೃಷ್ಣಶೆಟ್ಟಿ.—ಮೂರು ನಾಲ್ಕು ವರ್ಷ ನೂಳ್ಯ ಪಂಚಾಯತಿ ಡೀ-ಫಂಕ್ಟ್ ಆಗಿತ್ತು, ಕೆಲಸ ನಡೆಯಲಿಲ್ಲ ಅಂದ ಮೇಲೆ ಅದು ನಿರ್ಣಯ ಪಾಸು ಮಾಡಿರುವುದು ಹೇಗೆ ?

ಶ್ರೀ ಆರ್. ಎಂ. ಪಾಟೀಲ್.—ಇರುವ ಸದಸ್ಯರಿಗೆ ಬುದ್ಧಿ ಬಂದು ಒಂದು ಕಡೆ ಕೂಡಿದರೆ ಕೆಲಸ ಆಗಬಹುದು.

Sri K. P. GADAG.—Whether any other agency was functioning when this Panchayet was defunct ?

ಶ್ರೀ ಆರ್. ಎಂ. ಪಾಟೀಲ್.—ಸಭೆ ಕೂಡಿಸುವುದನ್ನು ತಾವೇ ಬಿಟ್ಟಿದ್ದರು ಎಂದು ಹೇಳಬಹುದು

ಶ್ರೀ ಎ. ಕೃಷ್ಣಶೆಟ್ಟಿ.—ಡೀ-ಫಂಕ್ಟ್ ಆಗಿತ್ತು ಅಂದರೆ ಪಂಚಾಯತಿ ಇರಲಿಲ್ಲ ಎಂದು ಅರ್ಥ. ಆಗುತ್ತದೆ. ಅದು ಪುನರ್ ಜನ್ಮ ತಾಳಿ ನಿರ್ಣಯ ಮಾಡಿರುವುದು ಹೇಗೆ ?

ಶ್ರೀ ಆರ್. ಎಂ. ಪಾಟೀಲ್.—ಪಂಚಾಯತಿ ಕೂಡದೇ ಇದ್ದರೆ ಡೀ-ಫಂಕ್ಟ್ ಆಗುತ್ತದೆ. ಆದರೆ ಕಾನೂನು ಪ್ರಕಾರ ಅದು ಡೀ-ಫಂಕ್ಟ್ ಅಲ್ಲ.